ಶ್ರೀ ಬಿ. ರಾಚಯ್ಯ.—ಹಾಗಿದ್ದರೂಕೂಡ ಇಬ್ಬರು ಮೂವರು ಜನ ಮಂತ್ರಿಗಳು ಇಂಥ ಸಮಾರಂಭಗಳಿಗೆ ಅನಾವಶ್ಯಕವಾಗಿ ಅವಕಾಶ ಕೊಟ್ಟು ಭಾಗವಹಿಸುತ್ತಿರುವುದು ಗೊತ್ತಿದೆಯೇ?

ಶ್ರೀ ಎಚ್. ಎಸ್. ರುದ್ರಪ್ಪ.—ಅನಾವಶ್ಯಕವಾಗಿ ಅಲ್ಲ. ನಾನಾಗಲೇ ಓದಿ ಹೇಳಿದ್ದೇನೆ. ಎಂಥೆಂಥ ಸಮಾರಂಭಗಳಿಗೆ ಹೋಗಿದ್ದೇವೆ ಎಂಬುದನ್ನು. ರೈತರ ಸಮ್ಮೇಳನ, ಮಲೆನಾಡಿನ ರೈತರ ಸಮ್ಮೇಳನ ಮುಂತಾದುವುಗಳಿಗೆ ಅವಶ್ಯಕವಾಗಿ ಸಂಬಂಧಪಟ್ಟ ಮಂತ್ರಿಗಳು ಹೋಗಬೇಕಾಗಿರುತ್ತದೆ. ಅನೇಕ ಜನ ಆ ಸಂದರ್ಭದಲ್ಲಿ ಸೇರುವುದರಿಂದ ನಾನಾ ವಿಧವಾದ ಅವರ ತೊಂದರೆಗಳನ್ನು ತಿಳಿದುಕೊಳ್ಳುವುದಕ್ಕೆ ಅವಕಾಶವಾಗುತ್ತದೆ.

Sri C. J. MUCKANNAPPA.—Is it not a fact that the Chief Minister when he visited Gulbarga at the time of Urs had no time to look into the files and give interviews?

Sri H. S. RUDRAPPA.—I cannot answer that question in detail.

ಒಬ್ಬ ಸದಸ್ಯರು.—ಕೆಲವು ಮಂತ್ರಿಗಳು ಎಂ. ಎಲ್. ಎ. ಗಳಿಗೆ ನೇರವಾಗಿ ಪತ್ರ ಬರೆದು ಒಂದು ಸಮಾರಂಭವನ್ನು ಏರ್ಪಾಡು ಮಾಡುವಂತೆ ಸೂಚನೆ ಕೊಟ್ಟು, ಆಮೇಲೆ ಅಲ್ಲಿಗೆ ಪ್ರವಾಸ ಕೈಕೊಂಡಿರುವುದು ತಮಗೆ ಗೊತ್ತಿದೆಯೇ?

ಶ್ರೀ ಎಚ್. ಎಸ್. ರುದ್ರಪ್ಪ.—ಇಲ್ಲ.

ಶ್ರೀ ಜಿ. ದುಗ್ಗಪ್ಪ.—ನಾನೊಂದು ಉಚಿತ ಪ್ರಶ್ನೆಯನ್ನು ಕೇಳಿ ಮಂತ್ರಿಗಳಿಂದ ಉತ್ತರ ಪಡೆಯಬೇಕೆಂದಿದ್ದೇನೆ. ಗೊತ್ತಿದ್ದರೆ ಈಗಲೇ ಹೇಳಲಿ, ಇಲ್ಲದಿದ್ದರೆ ಉತ್ತರ ತರಿಸಿಕೊಂಡು ತಿಳಿಸಲಿ. ಏನೆಂದರೆ, ಮಾನ್ಯ ಸಚಿವರೊಬ್ಬರು ಹಿರಿಯೂರಿನಲ್ಲಿ ಇದೆಯೆಂದು ಹೇಳಲಾದ ಪ್ರೌಢಶಾಲೆಯ ಪ್ರಾರಂಭೋತ್ಸವಕ್ಕೆ ಒಪ್ಪಿಕೊಂಡು ಅಲ್ಲಿಗೆ ಹೋದಾಗ, ಅಂಥ ಪ್ರೌಢಶಾಲೆಯೇ ಇಲ್ಲವೆಂದು ಅವರಿಗೆ ಆಮೇಲೆ ತಿಳಿವಳಿಕೆಗೆ ಬಂದುದು ತಮಗೆ ಗೊತ್ತಿದೆಯೇ?

ಶ್ರೀ ಎಚ್. ಎಸ್. ರುದ್ರಪ್ಪ.—ಗೊತ್ತಿಲ್ಲ.

Quantity of Commercial Crops grown in the State.

Q.—969. Sri A. R. BADRINARAYAN (Thirthahalli).—

Will the Government be pleased to state:—

the total quantity of coffee, tea, cardamom, pepper and other commercial crops grown in the State?

A.—Sri H. S. RUDRAPPA (Minister for Agriculture).—

As follows:—

	Name of crop		*Total production*
1.	Coffee	...	14,77,553 Bushels of 28 Mysore measures.
2.	Tea	...	25,84,141 lbs.
3.	Cardamom	...	663 tons.
4.	Groundnut	...	5,57,312 tons.
5.	Sugarcane	...	30,93,962 tons.
6.	Cotton	...	3,58,434 bales of 392 lbs. each
7.	Tobacco	...	18,345 tons.
8.	Arecanut	...	5,70,000 mds.
9.	Ginger (55-56)	...	4,460 tons.
10.	Onions	...	1,04,443 tons.
11.	Potatoes	...	14,302 tons.
12.	Cocoanut (55-56)	...	2,17,716 tons.
13.	Cashewnut (55-56)	...	100 tons.
14.	Garlic (55-56)	...	1,539 tons.
15.	Turmeric (55-56)	...	2,195 tons.
16.	Pepper	...	1,55,225 mds.
17.	Sesamum	...	16,226 tons.
18.	Chillies	...	31,040 tons.
19.	Castor	...	7,870 tons.

ಶ್ರೀ ಎ ಆರ್. ಬದರಿನಾರಾಯಣ್.—ಈಗ್ಗೆ ಐದು ವರ್ಷಗಳ ಹಿಂದೆ ಇದ್ದಂಥ ಉತ್ಪತ್ತಿಗಿಂತ ಈಗಿರುವ ಉತ್ಪತ್ತಿ ಎಷ್ಟು ಪ್ರಮಾಣದಲ್ಲಿ ಹೆಚ್ಚಾಗಿದೆ?

ಶ್ರೀ ಎಚ್. ಎಸ್. ರುದ್ರಪ್ಪ.—ಈಗ ಅನೇಕ ಭಾಗಗಳು ಸೇರಿರುವುದರಿಂದ ಆ ಸಮಾಚಾರವನ್ನು ಈಗ ಕೊಡಲಕ್ಕೆ ಕಷ್ಟವಾಗುತ್ತದೆ. ಹಳೇ ಮೈಸೂರಿನ ಬಗ್ಗೆ ಬೇಕಾದರೆ ತರಿಸಿಕೊಡುತ್ತೇನೆ.

ಶ್ರೀ ಎ. ಆರ್. ಬದರಿನಾರಾಯಣ್.—ಎಷ್ಟು ಪ್ರಮಾಣದಲ್ಲಿ ಹೆಚ್ಚಿದೆ ಎಂದು rough ಆಗಿ ಹೇಳುವುದಕ್ಕೆ ಸಾಧ್ಯವೇ?

Sri H. S. RUDRAPPA.—After all it might not be a correct figure. But I can say that it has increased by 25 per cent.

ಶ್ರೀ ಎ. ಆರ್. ಬದರಿನಾರಾಯಣ್.—ಉತ್ಪತ್ತಿಯನ್ನು ಹೆಚ್ಚು ಮಾಡುವುದಕ್ಕೆ ಏನು ಕಾರ್ಯಕ್ರಮಗಳನ್ನು ತೆಗೆದುಕೊಳ್ಳುತ್ತಿದ್ದೀರಿ ?

ಶ್ರೀ ಎಚ್. ಎಸ್. ರುದ್ರಪ್ಪ.—ಕಾಫಿ ಸಂಶೋಧನಾ ಕೇಂದ್ರವನ್ನು ಸ್ಥಾಪನೆ ಮಾಡಿದ್ದೇವೆ. ಅವರಿಗೆ ಬೇಕಾದ ಅನುಕೂಲಗಳನ್ನು ಒದಗಿಸಿದ್ದೇವೆ. ಅದೇ ರೀತಿ ಏಲಕ್ಕಿ ಬೆಳೆಯಲು ಜಮೀನನ್ನು ಕೊಡುತ್ತಿದ್ದೇವೆ. ಸೇಂಗಾ ಬೆಳೆಗಾಗಿ ವಿಶೇಷ ಮಾದರಿಯ ಬೀಜಗಳನ್ನು ತಯಾರುಮಾಡಿ, ನೀರಾವರಿಯಿಂದ ಬೆಳೆಯುತಕ್ಕ ವಿಧಾನವನ್ನು ಕೂಡ ಮಾಡುತ್ತಿದ್ದೇವೆ. ಹೀಗೆ ಪ್ರತಿಯೊಂದಕ್ಕೂ ಮಾಡಲಾಗುತ್ತಿದೆ.

ಶ್ರೀ ಎ. ಆರ್. ಬದರಿನಾರಾಯಣ್.—The total value of commercial crops ಎಷ್ಟು ಎಂಬುದನ್ನು ಹೇಳುವುದಕ್ಕೆ ಸಾಧ್ಯವೇ ?

ಶ್ರೀ ಎಚ್. ಎಸ್. ರುದ್ರಪ್ಪ.—ಹೇಳಲಕ್ಕಾಗುವುದಿಲ್ಲ.

Sri G. ANNA RAO.—May I know the total area of commercial crops and the total area of foodcrops under cultivation ?

Sri H. S. RUDRAPPA.—I have not got the figure so far as food crops are concerned. This question concerns only with the commercial crops.

Sri G. ANNA RAO.—What is the percentage ? What is the ratio ?

Sri H. S. RUDRAPPA.—It may be about 20 per cent.

Sri G. ANNA RAO.—Commercial Crops ?

Sri H. S. RUDRAPPA.—Yes.

Sri J. VENKATAPPA.—May I know the area under potato cultivation ?

Sri H. S. RUDRAPPA.—The area is 16,000 acres. Sir, a correction has to be made. In my previous answer, I had stated that 20 per cent is the area of commercial crop cultivation. I find that it may be more. If cotton and groundnut crops are included, it may be about 35 per cent.

Sri J. B. MALLARADHYA.—May I know whether Government consider that mulberry is a commercial crop or food crop ?

Sri H. S. RUDRAPPA.—It is a commercial crop.

Sri J. B. MALLARADHYA.—Then why it is excluded from this answer ?

Sri H. S. RUDRAPPA.—I am sorry, Sir.

Sri J. VENKATAPPA.—May I know the average yield of potato per acre ?

Sri H. S. RUDRAPPA.—I have stated that the area under cultivation of potatoes is about 16,000 acres and the quantity that is produced is about 14,302 tons.

Sri J. VENKATAPPA.—What is the average yield per acre ?

Sri H. S. RUDRAPPA.—Roughly the average yield per acre is less than a ton.

Sri J. VENKATAPPA.—It is less than a ton, Sir !

Sri H. S. RUDRAPPA.—I am giving the average yield only.

Sri H. C. LINGA REDDY.—May I know whether a scheme is launched for the development of cashewnut in the State ?

Sri H. S. RUDRAPPA.—We have got information with regard to the former Mysore State. I will give the figure for 1955-56. It is 5,528 acres. Including the other areas, it may be about 15,000 acres—the total area.

Sri A. BHEEMAPPA NAIK.—How much of these commercial crops are consumed locally and how much is exported ?

Sri H. S. RUDRAPPA.—I am not able to answer that question, Sir. Because, it is very difficult. We have no statistics as to how much is consumed and how much is exported.

Sri A. BHEEMAPPA NAIK.—Is any arrangement made by Government to collect all this statistical data and if so which is the book which gives all these details ?

Sri H. S. RUDRAPPA.—We have got some rough material to be furnished to Hon'ble Member. It is a rough calculation. But you have to take into consideratian the material that is exported by lorry and other modes of transport excluding rail, and you will see that it is not possible to give the correct figure.

Sri A. BHEEMAPPA NAIK.—Will Government assure this House that proper arrangements will be made to collect all the statistics hereafter ?

Sri H. S. RUDRAPPA.—Yes.

ಶ್ರೀ ಡಿ. ಎಚ್. ರುದ್ರಪ್ಪ.—ಅಡಿಕೆ ಬೆಳೆಯುವ ಒಟ್ಟು ವಿಸ್ತೀರ್ಣವೆಷ್ಟು ?

ಶ್ರೀ ಎಚ್. ಎಸ್. ರುದ್ರಪ್ಪ.—87 ಸಾವಿರ ಎಕರೆ,

ಶ್ರೀ ಎಸ್. ಆರ್. ರಾಮಯ್ಯ.—ಆಲೂಗಡ್ಡೆ 16 ಸಾವಿರ ಎಕರೆಯಲ್ಲಿ ಬೆಳೆಯುತ್ತದೆಂದು ಹೇಳಿದರು. ಇದರೊಳಗೆ average yield ಬಹಳ ಕಡಮೆಯಾಗುತ್ತದೆನ್ನುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಎಚ್. ಎಸ್. ರುದ್ರಪ್ಪ.—ಬಂದಿದೆ. ಅದಕ್ಕೋಸ್ಕರವೇ ಬೇರೆ ಬೀಜವನ್ನು ತರಿಸುವುದಕ್ಕೆ ಇಲಾಖೆಯ ಮೂಲಕ ಕೊಡುವುದಕ್ಕೆ ಹಾಸನದಲ್ಲಿ ಒಂದು ರೀಸರ್ಚ್ ಫಾರಂ ಮಾಡಬೇಕು ಎಂದು ಹೇಳಿದೆ.

Sri C. S. HULKOTI.—May I know the extent of cotton growing area?

Sri H. S. RUDRAPPA.—It is about 24 lakhs and odd.

Sri C. S. HULKOTI.—What is the extent of area in Bombay Karnatak?

Sri H. S. RUDRAPPA.—I am unable to give an answer with regard to that particular question.

ಶ್ರೀ ಎಚ್. ಜಿ. ನರಸಿಂಹೇಗೌಡ.—ತೆಂಗಿನಗಿಡ ಬೆಳೆಯತಕ್ಕ ಪ್ರದೇಶವೆಷ್ಟು?

ಶ್ರೀ ಎಚ್. ಎಸ್. ರುದ್ರಪ್ಪ.—1,74,000 ಎಕರೆಗಳು.

ಶ್ರೀ ಎಚ್. ಜಿ. ನರಸಿಂಹೇಗೌಡ.—ಇದರ ಬಗ್ಗೆ ಸಂಶೋಧನಾ ಕೇಂದ್ರವನ್ನು ಎಲ್ಲೆಲ್ಲ ಮಾಡಿದ್ದೀರಿ.

ಶ್ರೀ ಎಚ್. ಎಸ್. ರುದ್ರಪ್ಪ.—ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಂದು ಇದೆ. ಹಾಸನ ಜಿಲ್ಲೆಯಲ್ಲಿ ಒಂದನ್ನು ಮಾಡಿದ್ದೇವೆ. ನರ್ಸರಿ ಬೇರೆ ಇದೆ. We have established one research farm in Hassan District.

ಶ್ರೀ ಎಚ್. ಜಿ. ನರಸಿಂಹೇಗೌಡ.—ತೆಂಗಿನಬೆಳೆಗೆ ಸಂಬಂಧಿಸಿದ ಸಂಶೋಧನಾ ಕೇಂದ್ರಗಳು ಆಯಾ ಪ್ರದೇಶಗಳಲ್ಲಿ ಒಂದೊಂದು ಇರುವುದು ಒಳ್ಳೆಯದಲ್ಲವೇ?

ಶ್ರೀ ಎಚ್. ಎಸ್. ರುದ್ರಪ್ಪ.—ಆ ರೀತಿ ಮಾಡಲು ಕಷ್ಟವಾಗುತ್ತದೆ. ಇಂಡಿಯಾ ಸರ್ಕಾರದವರೂ ಮತ್ತು ಅನೇಕ ತಜ್ಞರೂ ಬಂದು ನೋಡಿ ಕೇಂದ್ರವಾಗಿರತಕ್ಕ ಒಂದೇ ಸ್ಥಳದಲ್ಲಿ ಇರಬೇಕು ಎಂದು ಹಾಸನದ ಡಿಸ್ಟ್ರಿಕ್ಟಿನಲ್ಲಿ ಮಾಡಬೇಕೆಂದು ತಿಳಿಸಿದುದರಿಂದ ಅಲ್ಲಿ ಮಾಡಿದ್ದೇವೆ.

ಶ್ರೀ ಎ. ಆರ್. ಬದರಿನಾರಾಯಣ್.—ಹೆಚ್ಚು ಬೆರೆ ಬಾಳತಕ್ಕ ಕಮರ್ಷಿಯಲ್ ಬೆಳೆಗಳು ಮಲೆನಾಡಿನಲ್ಲಿ ಬೆಳೆಯುವುದರಿಂದ ಆ ಭಾಗದಲ್ಲಿ ಸಂಚಾರ ಸೌಕರ್ಯಗಳನ್ನು ಹೆಚ್ಚಿಗೆ ಕಲ್ಪಿಸಿದ್ದೀರಾ?

ಶ್ರೀ ಎಚ್. ಎಸ್. ರುದ್ರಪ್ಪ.—ಅದು ಬೇರೆ ಪ್ರಶ್ನೆಯಾಯಿತು. ಮಾನ್ಯ ಸದಸ್ಯರು ಹೇಳಿದ ವಿಷಯವನ್ನು ಗುರುತುಮಾಡಿಕೊಳ್ಳುತ್ತೇನೆ.

ಶ್ರೀ ಡಿ. ಟಿ. ಸೀತಾರಾಮರಾವ್.—ಈ ಬೆಳೆಗಳಲ್ಲಿ ಕೊರತೆಯಾಗಿರುವ ಬೆಳೆಗಳು ಯಾವುವು, ಸಮೃದ್ಧಿಯಾಗಿರುವ ಬೆಳೆಗಳು ಯಾವುವು ಎಂಬುದನ್ನು ಹೇಳುತ್ತೀರಾ?

ಶ್ರೀ ಎಚ್. ಎಸ್. ರುದ್ರಪ್ಪ.—ಈ ಸಮಾಚಾರವನ್ನು ಇಂಡಿಯಾ ದೇಶಕ್ಕೆ ಸಂಬಂಧಿಸಿದಂತೆ ಮಾತ್ರ ಹೇಳಬಹುದು. ಮೈಸೂರು ದೇಶಕ್ಕೆ ಮಾತ್ರ ಬೇಕು ಎಂದರೆ ಹೇಳುವುದಕ್ಕಾಗುವುದಿಲ್ಲ.

ಶ್ರೀ ಎಂ. ಎಂ. ಪಾಟೀಲ್.—ಸೇಂಗಾಬೆಳೆ ತೆಗೆಯುವ ಪ್ರದೇಶ ಜಾಸ್ತಿಯಾಗಿದೆಯೇ ಅಥವ ಕಡಮೆಯಾಗಿದೆಯೇ?

ಶ್ರೀ ಎಚ್. ಎಸ್. ರುದ್ರಪ್ಪ.—ಜಾಸ್ತಿಯಾಗಿದೆ.

ಶ್ರೀ ಎಂ. ಎಂ. ಪಾಟೀಲ್.—ಅದರ ಏರಿಯಾ ಎಷ್ಟು ಎಂದು ತಿಳಿಸುವುದಕ್ಕಾಗುತ್ತದೆಯೇ?

ಶ್ರೀ ಎಚ್. ಎಸ್. ರುದ್ರಪ್ಪ.—20,70,000 ಎಕರೆಗಳು.

ಶ್ರೀ ಡಿ ಮೂಕಪ್ಪ.—ಕಬ್ಬು ಬೆಳೆಯತಕ್ಕ ಪ್ರದೇಶ ವೆಷ್ಟು?

ಶ್ರೀ ಎಚ್. ಎಸ್. ರುದ್ರಪ್ಪ.—1,22,867 ಎಕರೆಗಳು.

ಶ್ರೀ ಡಿ. ಮೂಕಪ್ಪ.—ಕಬ್ಬು ಬೆಳೆಯತಕ್ಕ ಪ್ರದೇಶ ಮಲೆನಾಡಿನಲ್ಲಿ ಹೆಚ್ಚಾಗಿದೆ ಎನ್ನುವುದು ಗೊತ್ತಿದೆಯೇ?

ಶ್ರೀ ಎಚ್. ಎಸ್. ರುದ್ರಪ್ಪ.—ಬಯಲುಸೀಮೆಗೆ ಸೇರಿದ ಮಂಡ್ಯ ಮತ್ತು ಗಂಗಾವತಿ; ಮತ್ತು ಭದ್ರಾಪ್ರದೇಶಗಳಲ್ಲಿ ಮಲೆನಾಡಿಗಿಂತ ಜಾಸ್ತಿ ಬೆಳೆಯುತ್ತದೆ.

ಶ್ರೀ ಟಿ. ತಾರೇಗೌಡ.—ವರ್ಜಿನಿಯಾ ಹೊಗೆಸೊಪ್ಪು, ನಿಪ್ಪಾಣಿ ಹೊಗೆಸೊಪ್ಪು, ಬೀಡಿ ಹೊಗೆಸೊಪ್ಪು—ಇವು ಬೆಳೆಯುವ ಪ್ರದೇಶವೆಷ್ಟೆಷ್ಟು ಎಂದು ಹೇಳುವುದಕ್ಕೆ ಆಗುತ್ತದೆಯೇ?

Sri H. S. RUDRAPPA.—That is a varying factor.

ಶ್ರೀ ಜಿ. ಬಿ. ಶಂಕರರಾವ್.—ಕಮರ್ಷಿಯಲ್ ಕ್ರಾಪ್ಸ್ ಎಂದು ಯಾವ ಆಧಾರದಮೇಲೆ ನಿರ್ಧರಿಸುತ್ತೀರಿ?

ಶ್ರೀ ಎಚ್. ಎಸ್. ರುದ್ರಪ್ಪ.—ಕಮರ್ಷಿಯಲ್ ಕ್ರಾಪ್ಸ್ ಎಂದರೆ ಏನೆಂಬುದು ಮಾನ್ಯಸದಸ್ಯರೆಲ್ಲರಿಗೂ ಗೊತ್ತಿರುವ ವಿಷಯ.

ಶ್ರೀ ಜಿ. ಬಿ. ಶಂಕರರಾವ್.—ಔಷಧಿಗಳಿಗೆ ಉಪಯೋಗಮಾಡುವ ಕೆಲವು ವನಸ್ಪತಿಗಳನ್ನು ಬೆಳೆಸುವುದರಿಂದ ಹಣ ಬರುವುದಿಲ್ಲವೇ?

ಶ್ರೀ ಎಚ್. ಎಸ್. ರುದ್ರಪ್ಪ.—ಬರುತ್ತದೆ. ಆದರೆ ವನಸ್ಪತಿ ಬೆಳೆ ನಮ್ಮ ಲೆಕ್ಕದಲ್ಲಿ ಬರುವುದಿಲ್ಲ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಹಾಸನ ಜಿಲ್ಲೆಯ ಅರಸೀಕೆರೆಗಿಂತ ತುಮಕೂರು ಜಿಲ್ಲೆ ಹೆಚ್ಚು ತೆಂಗು ಬೆಳೆಯುವ ಪ್ರದೇಶವಲ್ಲವೇ?

ಶ್ರೀ ಎಚ್. ಎಸ್. ರುದ್ರಪ್ಪ.—ಎಷ್ಟು ಬೆಳೆಯುತ್ತದೆಯೋ ಗೊತ್ತಿಲ್ಲ, ತೆಂಗು ಹಾಸನ ಜಿಲ್ಲೆಯಲ್ಲಿಯೂ ಬೆಳೆಯುತ್ತದೆ. ಮೊದಲನೆಯದಾಗಿ ಜಮೀನುಬೇಕು, ಎರಡನೆಯದಾಗಿ ಸಂಶೋಧನಾ ಕೇಂದ್ರವನ್ನು ಸ್ಥಾಪನೆಮಾಡುವುದಕ್ಕೆ ಏನೇನು ಅನುಕೂಲಗಳು ಬೇಕು ಎನ್ನುವುದನ್ನೂ ಗಮನಿಸಬೇಕು. ಅರಸೀಕೆರೆ ಮಧ್ಯರಾಷ್ಟ್ರದಲ್ಲಿದೆ, ಕೇಂದ್ರ ಸರ್ಕಾರದ ತಜ್ಞರು ಬಂದುನೋಡಿ ಎಲ್ಲ ಅನುಕೂಲತೆಗಳೂ ಅಲ್ಲಿವೆ ಎಂದು ಅಲ್ಲಿ ಮಾಡಬೇಕೆಂದು ಸಲಹೆ ಮಾಡಿದ್ದಾರೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ತಿಪಟೂರು ತಾಲ್ಲೂಕು, ಹೊನ್ನವಳ್ಳಿ ಹೋಬಳಿಯಲ್ಲಿ ಮಾಡಬೇಕೆಂದು ಹಿಂದೆ ಏರ್ಪಾಡು ಮಾಡಿರಲಿಲ್ಲವೆ?

ಶ್ರೀ ಎಚ್. ಎಸ್. ರುದ್ರಪ್ಪ.—ಅದನ್ನೆಲ್ಲಾ ಪರಿಶೀಲನೆ ಮಾಡಿನೋಡಿ ತೀರ್ಮಾನ ಮಾಡಿದ್ದೇವೆ. ನಾನುಕೂಡ ಆ ಸ್ಥಳವನ್ನು ನೋಡಿದ್ದೇನೆ. ಆ ತಜ್ಞರೂ ಎಲ್ಲವನ್ನು ನೋಡಿ ಸಲಹೆ ಮಾಡಿದ್ದಾರೆ. ಹಾಸನದ ಮೇಲೆ ಹೆಚ್ಚು ಮಮತೆ ಏನೂ ಇಲ್ಲ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಇನ್ನು ಮುಂದಾದರೂ ಯಾವ ಪ್ರಭಾವಕ್ಕೂ ಒಳಗಾಗದೆ ಮಾಡುತ್ತೀರಾ?

ಶ್ರೀ ಎಚ್. ಎಸ್. ರುದ್ರಪ್ಪ.—ಪ್ರಭಾವಕ್ಕೊಳಗಾಗಿ ಮಾಡಿದೆ ಎಂಬುದನ್ನು ಒಪ್ಪುವುದಕ್ಕಾಗುವುದಿಲ್ಲ. ಪ್ರಭಾವಕ್ಕೊಳಗಾಗಿದ್ದಿದ್ದರೆ ತಮಕೂರಿನಲ್ಲೇ ಮಾಡುತ್ತಿದ್ದೆವು.

ಶ್ರೀ ಬಿ. ಎಲ್. ನಾರಾಯಣಸ್ವಾಮಿ.—ಗೋಡಂಬಿ ಬೆಳೆಯುವ ಜಮೀನಿನ ವಿಸ್ತೀರ್ಣವೆಷ್ಟು ?

ಶ್ರೀ ಎಚ್. ಎಸ್. ರುದ್ರಪ್ಪ.—ಹೊಸ ಮೈಸೂರಿನಲ್ಲಿ ಸುಮಾರು 15 ಸಾವಿರ ಎಕರೆ ಆಗಬಹುದು.

ಶ್ರೀ ಟಿ. ಎಣ್. ಮೂಡಲಗಿರಿಗೌಡ.—ಇವುಗಳಲ್ಲಿ ಮೈಸೂರುದೇಶದ ಉಪಯೋಗಕ್ಕೆ ಬೇಕಾದಷ್ಟಾಗಿ ಬೇರೆ ಪ್ರಾಂತಗಳಿಗೆ ಹೋಗುವುದು ಯಾವ ಯಾವ ಬೆಳೆಗಳು ?

Sri H. S. RUDRAPPA.—Coffee, tea, cardamum, groundnut, tobacco, arecanut, ginger, onions, potatoes, cocoanut, cashewnut, garlic, pepper, sesamum, chillies. I have no information so far as castor is concerned. All other produce we have got more than what is required by us are exported.

ಶ್ರೀ ಟಿ. ಎಣ್. ಮೂಡಲಗಿರಿಗೌಡ.—ಇನ್ನೂ ಹೆಚ್ಚಾಗಿ ಹೊರಗೆ ಕಳುಹಿಸಬೇಕಾದುದು, ಹೊರಗೆ ಡಿವ್ಯಾಂಡ್ ಇರುವುದು ಯಾವ ಯಾವುದು ?

ಶ್ರೀ ಎಚ್. ಎಸ್. ರುದ್ರಪ್ಪ.—ಇವೆಲ್ಲಕ್ಕೂ ಇದೆ.

ಶ್ರೀ ಟಿ. ಎಣ್. ಮೂಡಲಗಿರಿಗೌಡ.—ಹಾಗಾದರೆ ಡಾಲರ್ ಬರತಕ್ಕ ಪದಾರ್ಥಗಳು ಯಾವುವು ?

ಶ್ರೀ ಎಚ್. ಎಸ್. ರುದ್ರಪ್ಪ.—ಕಾಫಿ, ಟೀ, ಕಡಲೇಕಾಯಿ, ಕಬ್ಬು, ಹತ್ತಿ. We also get cotton from outside, we do not export arecanuts because we are deficient. We do not export ginger. We export onions and potatoes to a certain extent.

ಶ್ರೀ ಟಿ. ಎಣ್. ಮೂಡಲಗಿರಿಗೌಡ.—ಇವಕ್ಕೆ ಎಷ್ಟು ಪ್ರಮಾಣದಲ್ಲಿ ಡಾಲರ್ ಬರುತ್ತದೆ, ಇದಕ್ಕೆ ಎಷ್ಟು ಪ್ರೋತ್ಸಾಹ ಕೊಡಬೇಕು ಎಂಬುದನ್ನು ಸರ್ಕಾರ ಪರಿಶೀಲನೆ ಮಾಡಿದ್ದಾರೆಯೇ ?

ಶ್ರೀ ಎಚ್. ಎಸ್. ರುದ್ರಪ್ಪ.—ಮಾಡಿದ್ದೇವೆ, ಪ್ರೋತ್ಸಾಹ ಕೊಡುತ್ತಿದ್ದೇವೆ.

Sri C. J. MUCKANNAPPA.—Out of the 19 crops, how many of them are dollar earning crops ?

Sri H. S. RUDRAPPA.—As I have told you, coffee, tea, cardamom, groundnut, sugarcane and cotton.

Sri A. BHEEMAPPA NAIK.—Is not cashewnut a dollar earning crop ?

Sri H. S. RUDRAPPA.—Yes; but we are importing from South Africa the raw material. We are exporting the finished product.

Sri A. BHEEMAPPA NAIK.—Are not conditions in Mysore favourable to grow the crop ?

Sri H. S. RUDRAPPA.—We are making hectic efforts and we have taken steps to have plantations in one lakh acres.

Sri A. BHEEMAPPA NAIK.—Are not conditions more favourable in Bangalore and Kolar Districts for the growth of cashewnut ?

Sri H. S. RUDRAPPA.—We have got good growth of trees, but so far as reports go, the yield is not profitable.

Sri G. ANNA RAO.—In view of the shortage in foodstuffs, do the Government propose to persuade the public to divert some of the areas for food crops?

Sri H. S. RUDRAPPA.—It is a suggestion no doubt, but we cannot take a definite decision because the dollar earning crops also are necessary to earn more dollars. Which is more profitable—Whether to grow more food crops or whether to grow more commercial crops and get dollars and import more foodgrains, is a matter to be considered seriously.

ಶ್ರೀ ಎ. ಮುನಿಯಪ್ಪ.—ಆಲೂಗಡ್ಡೆಯನ್ನು ಹೆಚ್ಚು ಬೆಳೆಯುವ ಪ್ರದೇಶ ಯಾವುದು ?

ಶ್ರೀ ಎಚ್. ಎಸ್. ರುದ್ರಪ್ಪ.—ಕೋಲಾರ ಮತ್ತು ಹಾಸನ ಜಿಲ್ಲೆಗಳಲ್ಲಿ ಜಾಸ್ತಿ ಬೆಳೆಯುತ್ತಾರೆ.

ಶ್ರೀ ಎ. ಮುನಿಯಪ್ಪ.—ಆಲೂಗಡ್ಡೆ ಮತ್ತು ಈರುಳ್ಳಿಯ ಉತ್ಪತ್ತಿಯನ್ನು ಜಾಸ್ತಿಮಾಡುವುದಕ್ಕೆ ಸರ್ಕಾರದವರು ಏನು ಕಾರ್ಯಕ್ರಮ ತೆಗೆದುಕೊಂಡಿದ್ದಾರೆ ?

ಶ್ರೀ ಎಚ್. ಎಸ್. ರುದ್ರಪ್ಪ.—ಹಾಸನದಲ್ಲಿ ಈ ಬೆಳೆಗೆ ಒಂದು ರೀತಿಯ ರೋಗಬರುತ್ತದೆ. ಅದರ ನಿವಾರಣೆಯ ಬಗ್ಗೆ ಒಂದು ಸಂಶೋಧನ ಕೇಂದ್ರವನ್ನು ಮಾಡಬೇಕೆಂಬ ಯೋಚನೆಯಿದೆ.

ಶ್ರೀ ಸಿ. ಎಸ್. ಹುಚ್ಚೊಕ್ಕೀಟಿ.—ಆಹಾರ ಬೆಳೆ ಹೆಚ್ಚು ಬೆಳೆಯುವುದಕ್ಕೆ ಯಾವ ಯಾವ ಕಾರ್ಯಕ್ರಮಗಳನ್ನು ಕೈಗೊಂಡಿದ್ದೀರಿ ?

Mr. SPEAKER.—It does not arise out of this question.

ಶ್ರೀ ಎಂ. ಎಂ. ಪಾಟೀಲ್.—ಕೇಂಗಾಯಿ ಬೆಳೆಯನ್ನು ಜಾಸ್ತಿಮಾಡಲು ಯಾವ ಯಾವ ಪ್ರಯತ್ನಗಳನ್ನು ಮಾಡಿದ್ದೀರಿ ?

ಶ್ರೀ ಎಚ್. ಎಸ್. ರುದ್ರಪ್ಪ.—ಮಾಡಬಹುದಾದ ಎಲ್ಲವನ್ನೂ ಮಾಡಿದ್ದೇವೆ. ನೀರಾವರಿ ಇದ್ದರೆ ಎರಡು ಮೂರರಷ್ಟು ಉತ್ಪತ್ತಿ ಬರುತ್ತದೆಂದು ಹೇಳಿ, ನೀರಾವರಿ ಇರುವ ಪ್ರದೇಶದಲ್ಲಿ ಬೆಳೆಯಲು ಪ್ರೋತ್ಸಾಹ ಕೊಡುತ್ತಿದ್ದೇವೆ.

ಶ್ರೀ ಡಿ. ಅಬ್ದುಲ್ ರಷೀದ್.—ಹುಣಸೇ ಹಣ್ಣು, ಮಾವು ಕಮರ್ಷಿಯಲ್ ಕ್ರಾಪ್ಸೇ ?

ಶ್ರೀ ಎಚ್. ಎಸ್. ರುದ್ರಪ್ಪ.—ಹೌದು.

ಶ್ರೀ ಎಸ್. ಆರ್. ರಾಮಯ್ಯ.—ಆಲೂಗಡ್ಡೆ ಸಂಶೋಧನಾ ಕೇಂದ್ರವನ್ನು ಸ್ಥಾಪಿಸುವುದಕ್ಕಾಗಿ ಕೇಂದ್ರ ಸರ್ಕಾರದವರು ಜಾಗವನ್ನು ಕೇಳಿದ್ದುದು ಎಲ್ಲಿ ?

ಶ್ರೀ ಎಚ್. ಎಸ್. ರುದ್ರಪ್ಪ.—ನಾನು ಬಂದ ಮೇಲೆ ಕೇಳಿಲ್ಲ, ನನಗೆ ಗೊತ್ತಿಲ್ಲ.

Sri H. C. LINGA REDDY.—Are the Government aware that production of onions, potatoes and chillies is very much affected on account of the recent enhancement of sales tax ?

Mr. SPEAKER.—That is a different question.

Sri H. S. RUDRAPPA.—Sales tax is a very minor tax. But it depends upon the value or the produce that we get for each crop. It fluctuates.

Dr. R. NAGAN GOWDA.—May I know whether the Government have any idea of the value of these commercial crops that go out of the Mysore State ?

Sri H. S. RUDRAPPA.—As I have already said, we have no correct data so far as that is concerned.

Dr. R. NAGAN GOWDA.—Can you get that information ?

Sri H. S. RUDRAPPA.—I have answered. As far as possible, we will try to get that information.

9-30 A.M.

ಶ್ರೀ ಕೆ. ಟಿ. ದಾನಪ್ಪ.—ಆಲೂಗಡ್ಡೆಯ ಸಲುವಾಗಿ ಎಲ್ಲಿಯಾದರೂ ರಿಸರ್ಚ್ ಸ್ಟೇಷನ್ ಮಾಡಿದ್ದೀರಾ ?

ಅಧ್ಯಕ್ಷರು.—ಈ ಪ್ರಶ್ನೆಗೆ ಉತ್ತರ ಕೊಟ್ಟಿದ್ದಾರೆ. ಹಾಸನದಲ್ಲಿ ಮಾಡುತ್ತೇವೆಂದು ಹೇಳಿದ್ದಾರೆ. ಸಾಧ್ಯ ವಿದ್ದರೆ ಕೋಲಾರದಲ್ಲಿಯೂ ಮಾಡಲಾಗುವುದೆಂದು ಹೇಳಿದ್ದಾರೆ.

ಒಬ್ಬ ಸದಸ್ಯರು.—ಸೀಗೆಕಾಯಿ ಮತ್ತು ಅಳಲೇ ಕಾಯಿ ಕೂಡ ಕಮರ್ಷಿಯಲ್ ಕ್ರಾಪ್ಸ್ ಅಲ್ಲವೇನು ?

ಶ್ರೀ ಎಚ್. ಎಸ್. ರುದ್ರಪ್ಪ.—ಅವು ಫಾರೆಸ್ಟ್ ಕ್ರಾಪ್ಸ್ ಆಗಿವೆ. ಕಮರ್ಷಿಯಲ್ ಕ್ರಾಪ್ಸ್ ಸಹ ಆಗಿವೆ.

ಶ್ರೀ ಜಿ. ಬಿ. ಶಂಕರರಾವ್.—ಮೆಣಸಿನಕಾಯಿ ಬೆಳೆಗೆ ರೋಗ ಬಂದು ಉತ್ಪತ್ತಿ ಕಡಿಮೆಯಾಗುತ್ತಿದೆ. ಇದಕ್ಕೆ ಏನಾದರೂ ಮಾಡಿದ್ದೀರಾ ?

ಶ್ರೀ ಎಚ್. ಎಸ್. ರುದ್ರಪ್ಪ.—ರೋಗ ತಗಲುತ್ತಿದೆ ಎಂಬುದು ಗೊತ್ತಿದೆ. ನಾಲ್ಕೈದು ವರ್ಷಗಳಿಂದ ಒಂದು ರಿಸರ್ಚ್ ಸ್ಟೇಷನ್ ಒಂದು ಸೂಕ್ತ ಸ್ಥಳದಲ್ಲಿ ಮಾಡಬೇಕೆಂದು ಇದೆ ಎಂದು ಹೇಳಿದೆ.

ಶ್ರೀ ಎ. ಎಂ. ಬಸವೇಗೌಡ.—ಹಣ್ಣು ಅಂದರೆ fruits ಎಷ್ಟು ಎಕರೆ ಭೂಮಿಯಲ್ಲಿ ಬೆಳೆಯಲಾಗುತ್ತಿದೆ ?

ಶ್ರೀ ಎಚ್. ಎಸ್. ರುದ್ರಪ್ಪ.—ಈ ಅಂಕಿಅಂಶಗಳು ಈಗ ನನ್ನ ಹತ್ತಿರ ಇಲ್ಲ. ಬೇಕಾದರೆ ತರಿಸಿ ಕೊಡುತ್ತೇನೆ.

ಶ್ರೀ ಎನ್. ಜಿ. ನರಸಿಂಹೇಗೌಡ.—ಹಾಸನದಲ್ಲಿ ಆಲೂಗಡ್ಡೆಯ ಸಲುವಾಗಿ ಏನಾದರೂ ಏರ್ಪಾಡು ಮಾಡಿದ್ದೀರಾ ?

ಶ್ರೀ ಎಚ್. ಎಸ್. ರುದ್ರಪ್ಪ.—ಇದೊಂದು ದೊಡ್ಡ ವಿಷಯ ಚರ್ಚೆ ನಡೆದಿದೆ. ದೊಡ್ಡ ಪ್ರಮಾಣದಲ್ಲಿ ಒಂದು ಯೋಜನೆಮಾಡಬೇಕಾಗುತ್ತದೆ.

ಶ್ರೀ ಟಿ. ಆರ್. ಪರಮೇಶ್ವರಯ್ಯ.—ಅಡಿಕೆ ಬೆಳೆಯುವ ಭೂಮಿ 87,000 ಎಕರೆ ಇದೆ. ಅಡಿಕೆನಸಿಗಳ ಬಗ್ಗೆ ಏನಾದರೂ ಏರ್ಪಾಡು ಮಾಡಿದ್ದೀರಾ ?

ಶ್ರೀ ಎಚ್. ಎಸ್. ರುದ್ರಪ್ಪ.—ಅಡಿಕೆಯ ಸಲುವಾಗಿ ತೀರ್ಥಹಳ್ಳಿಯಲ್ಲಿ ಒಂದು ರಿಸರ್ಚ್ ಫಾರಂ ಇದೆ. ಇನ್ನೂ ಅನೇಕ ಕಡೆ ಮಾಡಬೇಕೆಂದಿದ್ದೇವೆ. ಸೌತ್ ಕ್ಯಾನರಾದಲ್ಲಿ ಒಂದು ರಿಸರ್ಚ್ ಮತ್ತು ನರ್ಸರೀ ಫಾರಂ ಇದೆ, ಸಬ್‌ಸಿಡಿ ಕೊಟ್ಟು ಅಡಿಕೆ ನಸಿಗಳನ್ನು ಒದಗಿಸುತ್ತಿದ್ದೇವೆ.

ಶ್ರೀ ಟಿ. ಆರ್. ಪರಮೇಶ್ವರಯ್ಯ.—ಶಿವಮೊಗ್ಗಾ ಜಿಲ್ಲೆಯಲ್ಲಿ ಅಡಿಕೆ ಬೆಳೆ ಹೆಚ್ಚಾಗಿ ಇರುತ್ತದೆ. ಅಲ್ಲಿ ಅಡಿಕೆ ನಸಿಗಳನ್ನು ಹಂಚುವುದಕ್ಕೆ ಏನಾದರೂ ಏರ್ಪಾಡುಮಾಡುತ್ತೀರಾ ?

ಶ್ರೀ ಎಚ್. ಎಸ್. ರುದ್ರಪ್ಪ.—ತೀರ್ಥಹಳ್ಳಿಯಲ್ಲಿ ಒಂದು ರಿಸರ್ಚ್ ಫಾರ್ಮ್‌ಮಾಡಿ ಅಡಿಕೆ ನಸಿಗಳನ್ನು ಹಂಚುವ ಏರ್ಪಾಡು ಮಾಡುತ್ತಿದ್ದೇವೆ. ತುಮಕೂರಿನ ಆ ಕಡೆಗೆ ಒಂದು ರಿಸರ್ಚ್ ಸ್ಟೇಷನ್ ಮಾಡಬೇಕೆಂದು ಅದಕ್ಕೋಸ್ಕರ ಜಾಗವನ್ನು ಕೂಡ ಅಕ್ವಯರ್ ಮಾಡಿದ್ದೇವೆ.

Sri G. B. SHANKAR RAO.—I want to know from what sources the Government have received these figures; is it from the Revenue Department or Agricultural Department ?

Sri H. S. RUDRAPPA.—From the Revenue Department. We have no other Department to collect statistics.

ಶ್ರೀ ಎ. ಮುನಿಯಪ್ಪ.—ಆಲೂಗಡ್ಡೆಯ ವ್ಯವಸಾಯವನ್ನು ಒಂದು ಸರಿಯಾದ ರೀತಿಯಲ್ಲಿ ಮಾಡುತ್ತಿದ್ದರೂ ಸಹ ಕಳೆದ ಹತ್ತಾರು ವರ್ಷಗಳಲ್ಲಿ ಚಿಕ್ಕಬಳ್ಳಾಪುರ, ಹಾಸನ ಈ ಪ್ರದೇಶದಲ್ಲಿ ಸುಮಾರು ನಾಲ್ಕು ಲಕ್ಷ ರೂಪಾಯಿಗಳಷ್ಟು ನಷ್ಟವಾಗಿದೆ ಎಂಬುದು ಸರಕಾರದ ಗಮನಕ್ಕೆ ಬಂದಿದೆಯೋ ?

ಶ್ರೀ ಎಚ್. ಎಸ್. ರುದ್ರಪ್ಪ.—ಸರಕಾರದ ಗಮನಕ್ಕೆ ಬಂದಿಲ್ಲ. ಆದರೆ ಮಾನ್ಯ ಸದಸ್ಯರು ಈಗ ಹೇಳಿದ್ದಾರೆ

ಶ್ರೀ ಎ. ಮುನಿಯಪ್ಪ.—ಇಂಥಾದ್ದನ್ನು ಗಮನಕ್ಕೆ ತಂದು ಕೊಳ್ಳುವುದು ಸರಕಾರದ ಜವಾಬ್ದಾರಿ ಅಲ್ಲವೇ ?

ಶ್ರೀ ಎಚ್. ಎಸ್. ರುದ್ರಪ್ಪ.—ನಮ್ಮ ಜವಾಬ್ದಾರಿ ಹೌದು.

ಶ್ರೀ ಎ. ಮುನಿಯಪ್ಪ.—ಹೀಗೆ ಉದಾಸೀನ ಮಾಡಿದರೆ ಸರಕಾರಕ್ಕೆ ಇನ್ನೂ ಹೆಚ್ಚು ನಷ್ಟವಾಗುತ್ತದೆ ಎಂಬುದು ತಮ್ಮ ಗಮನಕ್ಕೆ ಬಂದಿಲ್ಲವೇ ?

ಶ್ರೀ ಎಚ್. ಎಸ್. ರುದ್ರಪ್ಪ.—ನಷ್ಟವಾಗುವುದು ಗಮನಕ್ಕೆ ಬಂದಿದೆ. ಅದನ್ನು ಯೋಚನೆ ಮಾಡುತ್ತಿದ್ದೇವೆ.

ಶ್ರೀ ಎಸ್. ಆರ್. ರಾಮಯ್ಯ.—ಹಾಲೆಂಡದಿಂದ ಉತ್ತಮ ತರಗತಿಯ ಆಲೂಗಡ್ಡೆಯನ್ನು ಬೀಜಕ್ಕಾಗಿ ತರಿಸಿಕೊಡಬೇಕೆಂದು ಇಂಡಿಯಾ ಸರಕಾರವನ್ನು ಪ್ರಾರ್ಥಿಸಿಕೊಂಡಿಲ್ಲವೇ ?

ಶ್ರೀ ಎಚ್. ಎಸ್. ರುದ್ರಪ್ಪ.—ಹಾಲೆಂಡದಿಂದ ಆಲೂಗಡ್ಡೆ ತರಿಸಿಕೊಡಬೇಕೆಂದು ಇಂಡಿಯಾ ಸರಕಾರವನ್ನು ಪ್ರಾರ್ಥಿಸಲಾಗಿತ್ತು. ಆದರೆ ಈಗ Foreign Exchange ದೊರೆಯುವುದು ಬಹಳ ತೊಂದರೆಯಾಗಿದೆ. ಆದರೂ ಸಹ ನಾವು ಒತ್ತಾಯ ಮಾಡಿದ್ದೇವೆ,

ಶ್ರೀ ಕುಂದೂರು ರುದ್ರಪ್ಪ.—ರಿನರ್ಚ್ ಸ್ಟೇಷನ್ ಪ್ರಾರಂಭವಾಡುವುದಕ್ಕೆ ಸರಕಾರ ಮನಸ್ಸು ಮಾಡಿದ್ದರೆ ಏನೇನು ಕ್ರಮ ತೆಗೆದುಕೊಂಡಿದ್ದೀರಿ ?

ಶ್ರೀ ಎಚ್. ಎಸ್. ರುದ್ರಪ್ಪ.—ಯೋಚನೆಮಾಡ ಬೇಕಾಗುತ್ತದೆ.

Sri G. SIVAPPA.—May I know, Sir, whether it is a fact that the production of arecanut in our State is not self-sufficient ?

Sri H. S. RUDRAPPA.—Mysore State is self-sufficient. We are exporting a large quantity.

Mr. SPEAKER.—Question time is over.

ಒಬ್ಬ ಸದಸ್ಯರು.—ಪ್ರಶ್ನೆ ಕೇಳಲು ನನಗೆ ಅವಕಾಶ ದೊರೆಯಲಿಲ್ಲ. ಇನ್ನೂ ಹೆಚ್ಚು ಅವಧಿಯನ್ನು ಪ್ರಶ್ನೆ ಕೇಳುವದಕ್ಕೆ ಕೊಡಬೇಕು. ಇದೊಂದು ಮಹತ್ವದ ಪ್ರಶ್ನೆಯಾಗಿದೆ.

ಅಧ್ಯಕ್ಷರು.—ಈ ಪ್ರಶ್ನೆಗೆ ಸಾಕಷ್ಟು ಕಾಲವನ್ನು ನಾನು ಕೊಟ್ಟಿದ್ದೇನೆ.

ಶ್ರೀ ಎ. ಮುನಿಯಪ್ಪ.—ಸ್ವಾಮಿ, 26ನೇ ತಾರೀಖಿನ ದಿನ ಗುಡಿಬಂಡೆ-ಬಾಗೇಪಲ್ಲಿಯಲ್ಲಿ ಹರಿಜನರ ಬಾವಿಯ ಬಗ್ಗೆ ಒಂದು ಪ್ರಶ್ನೆ ಕಳುಹಿಸಿದ್ದೇನೆ. ಎಂಟು ಹತ್ತು ದಿವಸವಾದರೂ ಮಂತ್ರಿಗಳು ಅದಕ್ಕೆ ಉತ್ತರ ಕೊಟ್ಟಿಲ್ಲ. ಅದನ್ನು ಈಗ ಅವರು ಹೇಳುವರೋ ?

ಅಧ್ಯಕ್ಷರು.—ಇಲ್ಲಿ ಈಗ ಆ ಪ್ರಶ್ನೆ ಬರುವುದಿಲ್ಲ. ನೀವು ಏನಾದರೂ ಕೇಳುವುದಿದ್ದರೆ ಮೊದಲು ನನ್ನ ಹತ್ತಿರ ಬಂದು ನನಗೆ ಹೇಳಬೇಕು. ಮತ್ತು ಸಭೆಯಲ್ಲಿ ಕೇಳುವುದಕ್ಕೆ ಅವಕಾಶ ಕೊಡಬೇಕೆಂದು ನನ್ನ ಚೇಂಬರಿನಲ್ಲಿ ಮೊದಲು ನನ್ನನ್ನು ಕಂಡು ಕೇಳಿಕೊಳ್ಳಬೇಕ . ನಾನು ಒಪ್ಪಿದಮೇಲೆ ಅನಂತರ ಅಂಥ ವಿಷಯವನ್ನು ಸಭೆಯಲ್ಲಿ ಪ್ರಸ್ತಾಪಮಾಡಬೇಕು. ಆಗ ಅವಕಾಶ ಕೊಡುತ್ತೇನೆ.

ಶ್ರೀ ಎ. ಮುನಿಯಪ್ಪ.—ಸ್ವಾಮಿ, ಇದು ನನ್ನ ಸ್ವಂತದ ವಿಷಯವಲ್ಲ, ಸಾರ್ವಜನಿಕ ವಿಷಯವಾಗಿದೆ.

ಅಧ್ಯಕ್ಷರು.—ಸಭೆಯಲ್ಲಿ ಬರತಕ್ಕದ್ದೆಲ್ಲಾ ಸ್ವಂತದ ಪ್ರಶ್ನೆಯಿರುವದಿಲ್ಲ. ಎಲ್ಲಾ ಸಾರ್ವಜನಿಕ ಪ್ರಶ್ನೆಗಳೇ ಬರುತ್ತವೆ. ಆದಕಾರಣ ಮೊದಲು ನನಗೆ ಹೇಳಿ, ಇಂಥ ವಿಷಯವನ್ನು ಸಭೆಯಲ್ಲಿ ಎತ್ತುವದಕ್ಕೆ ಕೇಳಿಕೊಳ್ಳಬೇಕು. ನಾನು ಅವಕಾಶಕೊಡುತ್ತೇನೆ. ಆಮೇಲೆ ಸಭೆಯಲ್ಲಿ ಕೇಳಬಹುದು. ಇಲ್ಲದಿದ್ದರೆ ಗೊಂದಲವಾಗುತ್ತದೆ.

Sri C. J. MUCKANNAPPA.—Sir, I want to ask whether it is fair on the part of the Government to discriminate between Member and Member when the Assembly is in Session. If a distinguished guest comes to Mysore, the Government invite a few legislators for State dinner and they have discriminated between Member and Member. May I know.....

ಅಧ್ಯಕ್ಷರು.—ಇಂಥ ಪ್ರಶ್ನೆಯನ್ನು ಸಭೆಯಲ್ಲಿ ಪ್ರಸ್ತಾಪಿಸುವುದಕ್ಕಿಂತ ಮೊದಲುನನಗೆ ತಿಳಿಸಬೇಕು. ನಾನು ಒಪ್ಪಿದಮೇಲೆ ಸಭೆಯಲ್ಲಿ ತರಬೇಕು.

PAPER LAID ON THE TABLE.

Sri H. S. RUDRAPPA (Minister for Agriculture).—Sir, I beg to lay on the Table, the Mysore Legislature Travelling Allowance Rules,1957, issued under section 15 of the Mysore Legislature Salaries Act, 1956.

ADJOURNMENT MOTION

ಶ್ರೀ ಬಿ. ಕೆ. ಪುಟ್ಟರಾಮಯ್ಯ (ಚನ್ನಪಟ್ಟಣ).—ಹತ್ತು ಹದಿನೈದು ದಿವಸಗಳ ಹಿಂದೆ ನಾನು ಕೇಳಿದ್ದ ಸದಸ್ಯರ ಹಕ್ಕು ಬಾಧ್ಯತೆಗಳಿಗೆ ಸಂಬಂಧಪಟ್ಟ ಒಂದು ವಿಷಯ ತಮ್ಮ ಮುಂದಿದೆ. ಅದಲ್ಲದೆ ಒಂದು ನಿಲುವಳಿ ಸೂಚನೆಯನ್ನೂ ಸಹ ಕೊಟ್ಟಿದ್ದೇನೆ. ದೇಶದ ಮುಂದಿರುವ ಪ್ರಾಮುಖ್ಯವಾದ ವಿಷಯ ಇದು ಆಗಿರುವುದರಿಂದ ತಡವಾಗದಂತೆ ನೋಡಿಕೊಳ್ಳಬೇಕೆಂದು ನಾನು ಪ್ರಾರ್ಥಿಸುತ್ತೇನೆ. Yesterday I have sent another adjournment motion regarding Police excesses, ಅಂದರೆ ಹಿಂಸಾತ್ಮಕ ಕೃತಿಗಳ ಬಗ್ಗೆ ಕಳಿಸಿದ್ದೇನೆ. ಇದು ದೊಡ್ಡ ಮತ್ತು ಬೃಹತ್ ಸಮಸ್ಯೆ, ಇಂಥಾ ವಿಷಯವನ್ನು ಸಭೆಯ ಮುಂದೆ ತರುವುದಕ್ಕೆ ಅನಿರ್ದಿಷ್ಟ ಕಾಲದವರೆಗೆ ಮುಂದೆ ಹಾಕುತ್ತಿರುವುದು ಸರಿಯಲ್ಲ.

ಅಧ್ಯಕ್ಷರ .—ನೀವು ಕಳಿಸಿದ adjournment motion ಇದೆ. ಮುನಿಯಮ್ಮನ ಪ್ರಕರಣದ ಬಗ್ಗೆ ನಿಮ್ಮ ಪಕ್ಷದ ಹೇಳಿಕೆಗಳಿಗೆ ಸಮರ್ಥನೆ ಮಾಡುವುದಕ್ಕೆ authorities ತಂದುಕೊಡುತ್ತೇನೆಂದು ನೀವೇ ಹೇಳಿದ್ದೀರಿ. ಅದನ್ನು ನೀವು ಇನ್ನೂ ನನಗೆ ತಂದು ಕೊಟ್ಟಿಲ್ಲ. ಅದಕ್ಕೆ ತಡವಾಗಿದೆ.

VOTING OF DEMANDS FOR ADDITIONAL GRANTS FOR 1957-58.

Mr. SPEAKER.—In this connection, I would like to inform the House that all the Demands are before this House and Members may speak on all of them.

Sri M. C. NARASIMHAN (Kolar Gold Fields).—Sir, I have a representation to make. So far as these demands are concerned, on going through the notes submitted, we find that unfortunately they are not sufficiently detailed. So, we are not